ಅನೇಕ ರೈತಾಪಿ ಜನರು ಬಹಳಷ್ಟು ವ್ಯವಹಾರಿಕ ತೊಂದರೆಯಾದ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೆ :

ಈ) ಹಾಗಿದ್ದಲ್ಲಿ ಇಂತಹ ತೊಂದರೆಗಳನ್ನು ಪರಿಹಾರ ಮಾಡುವ ಬಗ್ಗೆ ಸರಕಾರದವರು ತೀವ್ರ ಗತಿಯಲ್ಲಿ ತಕ್ಕ ಕ್ರಮ ಕೈಕೊಳ್ಳುವರೆ : ಹಾಗಿದ್ದಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ಎಷ್ಟಿವೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ೧೨,೧೭೫ ಎಕರೆ, ೩೪ ಗುಂಟೆ, ೧೩ ಆಣೆಗಳು.

ಇ) ಇಲ್ಲ.

ಈ) ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ನನ್ನದು ೫೮ನೇ ಪ್ರಶ್ನೆ ಇದೆ. ಈ ಪ್ರಶ್ನೆಯನ್ನು ಕರೆದಾಗ ನಾನು ಸದನದಲ್ಲಿರಲಿಲ್ಲ.

ಶ್ರೀ ಬಿ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಬೇಕು. ಇಲ್ಲಿ ಇರದೇ ಬೇರೆ ಕಡೆ ಹೋಗಬಾರದು.

ಅಧ್ಯಕ್ಷರು.—ಅವರು ಹೊಸ ಸದಸ್ಯರು ಇದ್ದಾರೆ. ಅವರಿಗೆ ಅವಕಾಶ ಕೊಡೋಣ. ಅವರ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ.

ವರದಿಯನ್ನೊಪ್ಪಿಸುವುದು

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪ ಸಭಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ನಾನು ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಒಂದನೆಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಶ್ರೀ ಆರ್. ರಾಮಯ್ಯ.—ನಾನು ಸದರಿ ವರದಿಯನ್ನು ಒಪ್ಪಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಗಿದೆ.

ಗಮನ ಸೆಳೆಯುವ ಸೂಚನೆ

ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೂಕು ಚಿಕ್ಕಬೂದನೂರ ಗ್ರಾಮ ಕೊಳವೆ ಬಾವಿ ದುರಸ್ತಿ ಆಗದೇ, ಅಲ್ಲಿನ ಜನರಿಗೆ ತೊಂದರೆ ಆಗಿರುವ ವಿಚಾರದ ಬಗ್ಗೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಧ್ಯಕ್ಷರೇ, ನಾನು ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೂಕು ಚಿಕ್ಕಬೂದನೂರ ಗ್ರಾಮ ಕೊಳವೆ ಬಾವಿ ದುರಸ್ತಿ ಆಗದೇ ಅಲ್ಲಿನ ಜನರಿಗೆ ತೊಂದರೆ ಆಗಿರುವ ವಿಚಾರವನ್ನು ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಪಂಚಾಯತ್ ರಾಜ್ಯ ಮತ್ತು ಗ್ರಾಮೀಣ ಅಭಿವೃದ್ಧಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಕೌಲಜಗಿ ಅವರು ತಂದಿರುವ ಗಮನ ಸೆಳೆಯುವ ಸೂಚನೆಗೆ ಈ ರೀತಿ ಹೇಳಿಕೆಯನ್ನು ಕೊಡಬಯಸುತ್ತೇನೆ.

ಚಿಕ್ಕಬೂದನೂರು ಗ್ರಾಮದ ಜನಸಂಖ್ಯೆ ೧೯೮೧ರ ಜನಗಣತಿ ಪ್ರಕಾರ ೨೫೧೧ ಇದ್ದು ಅಲ್ಲಿ ಒಂದು ಕೊಳವೆ ಬಾವಿಯನ್ನು ಹಾಕಲಾಗಿದ್ದು ಅದು ದಿನಾಂಕ ೩೦-೧೦-೧೯೮೬ರ ವರದಿ ಮೇರೆಗೆ ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಾ ಇದೆ.

ಹಿರೇಬೂದನೂರು ಗ್ರಾಮದ ಜನಸಂಖ್ಯೆ ೨೦೫೨ ಇದ್ದು ಅಲ್ಲಿ ಏಳು ಕೊಳವೆ ಬಾವಿಗಳನ್ನು ಹಾಕಲಾಗಿದೆ. ಅವುಗಳಲ್ಲಿ ಮೂರು ಬಾವಿಗಳು ಯಶಸ್ವಿಯಾಗಿದ್ದು ಕೈಪಂಪುಗಳನ್ನು ಅಳವಡಿಸಲಾಗಿದ್ದು ಸಮರ್ಪಕವಾಗಿ ದಿನಾಂಕ ೩೦-೧೦-೧೯೮೬ರ ವರದಿ ಮೇರೆಗೆ ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿವೆ.